# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ
ನಂ.29, ವಿಜಯನಗರ 2 ನೇ ಹಂತ,
ಹಿನಕಲ್ ಮೈಸೂರು-570017
CIN: U40109KA2004SGC035177
Website: www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ಕಛೇರಿ
ಕಾರ್ಯ ಮತ್ತು ಪಾಲನೆ ಚಾಮುಂಡಿಪುರಂ ಉಪ-ವಿಭಾಗ,
66/11 KV ದಕ್ಷಿಣ ವಿದ್ಯುತ್ ವಿತರಣಾ ಕೇಂದ್ರ ಆವರಣ,
H.D ಕೋಟೆ-ಮಾನಂದವಾಡಿ ರಸ್ತೆ, ಮೈಸೂರು-570008.
aeecpm@cescmysore.org
ದೂರವಾಣಿ:0821-2488400


ಕ್ರಮ ಸಂಖ್ಯೆ:ಸಕಾನಿಇಂ(ವಿ)/ಸಲೆ/ಹಿಸ /ಚಾಉವಿ/2019-20/374-80 ದಿನಾಂಕ: 29 APR 20

## ಸಭಾ ನಡಾವಳಿಗಳು

ದಿನಾಂಕ 24-04-2019 ನೇ ಬುಧವಾರ ಸೋಮವಾರ ಮಧ್ಯಾಹ್ನ 3-00 ಗಂಟೆಗೆ ಚಾಮುಂಡಿಪುರಂ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ಮೈಸೂರು ವೃತ್ತ ಇವರ ಅಧ್ಯಕ್ಷತೆಯಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರುಗಳು

1) ಶ್ರೀ.ಸ್ವಾಮಿ.H.S. ಕಾ.ಇಂ(ವಿ) ಕಾ ಮತ್ತು ಪಾ ಎನ್.ಆರ್.ಮೊಹಲ್ಲಾ ವಿಭಾಗ, ಮೈಸೂರು
2) ಶ್ರೀ.ಮುಜಾಮಿಲ್ ಖಾನ್, ಕಾ.ಇಂ(ವಿ) ಕಾ ಮತ್ತು ಪಾ ವೃತ್ತ, ಮೈಸೂರು.
3) ಶ್ರೀ.ಆರ್.ಬಿ.ಕಿರಣ್ ಕುಮಾರ್, ಸ.ಕಾ.ಇಂ(ವಿ), ಚಾಮುಂಡಿಪುರಂ ಉಪವಿಭಾಗ, ಮೈಸೂರು.
4) ಶ್ರೀ.ಶಿವಪ್ರಸಾದ್. ಆರ್.ಬಿ. ಸ.ಇಂ(ತಾಂ)
5) ಶ್ರೀ.ರಕ್ಷಕ್ ಎಂ.ಸಿಂಗ್, ಸ.ಇಂ(ವಿ), ವಿದ್ಯಾರಣ್ಯಪುರಂ ಶಾಖೆ.
6) ಶ್ರೀ.ಇ.ಮಂಜು, ಸ.ಇಂ(ವಿ), ಲಕ್ಷ್ಮಿಪುರಂ ಶಾಖೆ.
7) ಶ್ರೀ.ಲೋಕೇಶ್, ಸ.ಇಂ(ವಿ), ಕಡಕೊಳ ಶಾಖೆ.
8) ಕುಮಾರಿ ಪ್ರಜ್ವಲಾ ಎನ್.ಸಿಂಹ, ಸಹಾಯಕ ಲೆಕ್ಕಾಧಿಕಾರಿ.
9) ಶ್ರೀ.ಎಸ್.ರವಿ. ಹಿರಿಯ ಸಹಾಯಕ.
10) ಶ್ರೀ.ರವಿ, ಕಿ.ಇಂ(ವಿ) ಜೆ.ಪಿ.ನಗರ ಶಾಖೆ.
11) ಶ್ರೀ.ರಾಮದಾಸ್, ಕಿ.ಇಂ(ವಿ) ಲಕ್ಷ್ಮಿಪುರಂ ಶಾಖೆ.

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ರವರು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.

| ಕ್ರ. ಸಂ | ಹೆಸರು ವಿಳಾಸ ಮೊಬೈಲ್ ಸಂಖ್ಯೆ | ಅಹವಾಲು/ಮನವಿ | ಕ್ರಮ |
|---|---|---|---|
| 1. | ಶ್ರೀ.ನಂಜುಂಡಸ್ವಾಮಿ<br>0821-2372674 | 1) ರಿಲಯನ್ಸ್ ಕಂಪನಿಯವರು ವಿದ್ಯುತ್ ಕಂಬಗಳ ಮೇಲೆ ಆಪ್ಟಿಕಲ್ ಫೈಬರ್ ಕೇಬಲ್ ಗಳನ್ನು ಎಳೆಯುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ, ಚಾವಿಸನಿನಿ ವತಿಯಿಂದ ಅನುಮತಿ ಇದೆಯೆ ಎಂದು ಕೇಳಿದರು. ಹಾಗೂ ಜೆ.ಪಿ.ನಗರ ವ್ಯಾಪ್ತಿಯಲ್ಲಿ ಕಂಬಗಳನ್ನು ಸಹ ನೆಡುತ್ತಿರುತ್ತಾರೆ ಎಂದು ತಿಳಿಸಿದರು. | ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸದರಿ ಕಾಮಗಾರಿಯನ್ನು ನಿರ್ವಹಿಸಲು ರಿಲಯನ್ಸ್ ಕಂಪನಿಯವರು ಇಲಾಖೆಗೆ ಪಾವತಿಸಬೇಕಾದ ವಂತಿಗೆಯನ್ನು ಪಾವತಿಸಿ ಅನುಮತಿ ಪಡೆದಿರುತ್ತಾರೆ ಎಂದು ತಿಳಿಸಿದರು. ಮತ್ತು ಸದರಿಯವರು ಕಂಬಗಳನ್ನು ನೆಡಲು ಚಾವಿಸನಿನಿ ವತಿಯಿಂದ ಅನುಮತಿ ನೀಡಿರುವುದಿಲ್ಲ ಎಂದು ತಿಳಿಸಿದರು. ಮುಂದುವರೆದು ಸದರಿ ಸ್ಥಳವನ್ನು ಪರಿಶೀಲಿಸಿ ಕಂಬಗಳನ್ನು ನೆಡುತ್ತಿದ್ದರೆ ಪಾಲಿಕೆ ಅಧಿಕಾರಿಗಳಿಗೆ ಪತ್ರ ಬರೆದು ಸ್ಪಷ್ಟೀಕರಣ ಕೋರುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |

| | | | |
|---|---|---|---|
| | | 2) ಮಳೆಯು ಆರಂಭವಾಗುತ್ತಿದ್ದಂತೆ ಅನಿಯಮಿತ ವಿದ್ಯುತ್ ಅಡಚಣೆ ಹೆಚ್ಚಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. ಹಾಗೂ ವಿದ್ಯುತ್ ಮಾರ್ಗದಲ್ಲಿರುವ ಮರಗಳನ್ನು ತೆರವುಗೊಳಿಸುವಂತೆ ಕೋರಿದರು. | ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ಮಳೆಗಾಲದ ಆರಂಭಕ್ಕೂ ಮುನ್ನಾ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಹಾಗೂ 11 KV ಮಾರ್ಗಗಳ ನಿರ್ವಹಣೆಯನ್ನು ಸಹ ಮಾಡಲಾಗಿದ್ದು ಮಳೆಗಾಲದಲ್ಲಿ ಉಂಟಾಗುವ ಅನಾಹುತಗಳ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ದಿನಪತ್ರಿಕೆಗಳಲ್ಲಿ ಈಗಾಗಲೇ ಪ್ರಕಟಣೆ ನೀಡಲಾಗಿರುತ್ತದೆ ಎಂದು ತಿಳಿಸಿದರು.<br>ಮುಂದುವರೆದು ವಿದ್ಯುತ್ ಮಾರ್ಗಗಳಲ್ಲಿರುವ ಮರಗಳ ರೆಂಬೆಗಳನಷ್ಟೇ ತೆರವುಗೊಳಿಸಲು ಅರಣ್ಯ ಇಲಾಖೆಯಿಂದ ಅನುಮತಿ ಇದ್ದು, ಮರಗಳನ್ನು ಪೂರ್ಣವಾಗಿ ತೆರವುಗೊಳಿಸಲು ಅವಕಾಶ ವಿರುವುದಿಲ್ಲ ಎಂದು ಸ್ಪಷ್ಟಪಡಿಸಿದರು. |
| 2 | ಶ್ರೀ.ಲಕ್ಷ್ಮಣ್<br>ಬಿನ್ ನರಸಿಂಹೇಗೌಡ<br>9844064949 | ಗೌರಿಶಂಕರ ನಗರ ವ್ಯಾಪ್ತಿಯ ಸರ್ವೆ ನಂ.161 ರಲ್ಲಿ ಎಂಟು ಸಂಖ್ಯೆ ಮನೆಗಳನ್ನು ನಿರ್ಮಿಸಿದ್ದು, ಅರ್ಜಿ ನೊಂದಾಯಿಸಿದ್ದು, ಅವುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಏಕೆ ವಿಳಂಭವಾಗಿರುತ್ತದೆ ಎಂದು ಪ್ರಶ್ನಿಸಿದರು. | ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ಸದರಿ ಸರ್ವೆ ನಂ.ನಲ್ಲಿ ನಿರ್ಮಿಸಿರುವ ಮನೆಗಳಿಗೆ ವಿದ್ಯುತ್ ಸಂಪರ್ಕ ನೀಡಲು ಮಾನ್ಯ ನ್ಯಾಯಾಲಯದಲ್ಲಿ ಜಮೀನಿನ ಮಾಲೀಕತ್ವದ ಬಗ್ಗೆ ಪ್ರಕರಣ ದಾಖಲಾಗಿದ್ದು, ತಡೆಯಾಜ್ಞೆ ವಿಧಿಸಿರುತ್ತಾರೆ. ಆದುದರಿಂದ ಸೂಕ್ತ ಕಾನೂನು ಸಲಹೆ ಪಡೆದು ವಿದ್ಯುತ್ ಸಂಪರ್ಕ ಕಲ್ಪಿಸಲು ವಿಳಂಭವಾಗಿರುತ್ತದೆ ಎಂದು ಸ್ಪಷ್ಟಪಡಿಸಿದರು.<br>ಹಾಗೂ ಸದರಿ ವಿಚಾರವಾಗಿ ತಹಶೀಲ್ದಾರ್ ರವರಿಗೆ ಪತ್ರ ಬರೆದು ಸ್ಪಷ್ಟೀಕರಣ ಕೊಡುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 3 | ಕಲ್ಪನ ಪ್ರಸನ್ನ<br>9448621035 | ಚಾವಿಸನಿನಿ ವತಿಯಿಂದ ಗ್ರಾಹಕರಿಗೆ ವಿದ್ಯುತ್ ಅಡಚಣೆ ಮತ್ತು ಬಿಲ್ ಗಳ ಬಗ್ಗೆ ನೀಡುತ್ತಿರುವ SMS ಸೇವೆಯನ್ನು ಪ್ರಶಂಸಿದರು.<br>ದಿನಾಂಕ 21-04-2019 ರಂದು ರಾತ್ರಿ BEML Layout ಬಡಾವಣೆಯಲ್ಲಿ ವಿದ್ಯುತ್ ಸಂಪರ್ಕ ಕಡಿತ ಗೊಂಡಿದ್ದು, ಕೆಲವು ಗಂಟೆಗಳ ನಂತರ ಸುತ್ತಮುತ್ತಲಿನ ಪ್ರದೇಶ ಗಳಿಗೆ ವಿದ್ಯುತ್ ಸಂಪರ್ಕ ಪುನರ್ ಸ್ಥಾಪಿಸಲಾಗಿರುತ್ತದೆ. ಆದರೆ BEML Layout ಬಡಾವಣೆಗೆ ಬೆಳಗಿನ ವರೆಗೂ ವಿದ್ಯುತ್ ಸರಬರಾಜಾಗಿರುವುದಿಲ್ಲ ಎಂದು ತಿಳಿಸಿದರು. | ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸದರಿ ಗ್ರಾಹಕರನ್ನು ವಂದಿಸಿದರು.<br>ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಶಾಖಾಧಿಕಾರಿ ಗಳಿಗೆ ಪ್ರಶ್ನಿಸಿದರು. ಹಾಗೂ ಜೆ.ಪಿ.ನಗರ ಶಾಖಾಧಿಕಾರಿಗಳು ಸದರಿ ದಿನಾಂಕದಂದು ಪಿನ್ ಪಂಚರ್ ಆಗಿದ್ದು, ಸದರಿ ಬಡಾವಣೆಯನ್ನು ಬೇರ್ಪಡಿಸಿ ಉಳಿದ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ ಎಂದು ತಿಳಿಸಿದರು. ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಮಾತನಾಡಿ ಸದರಿ ಬಡಾವಣೆಯ ಪಿನ್ ಗಳನ್ನು ಮತ್ತೊಮ್ಮೆ ಪರಿಶೀಲಿಸಿ ಅಗತ್ಯವಿದ್ದಲ್ಲಿ ಪಿನ್ ಇನ್ಸುಲೇಟರ್ ಗಳನ್ನು ಬದಲಾಯಿಸಲು ಅಂದಾಜು ಪಟ್ಟಿ ಸಲ್ಲಿಸುವಂತೆ ಶಾಖಾಧಿಕಾರಿಗಳಿಗೆ ಸೂಚಿಸಿದರು. |
| 4 | ಶ್ರೀ.T.C.ರಂಗನಾಥ<br>9886227723 | ಆರ್.ಆರ್.ಸಂಖ್ಯೆ.A-23202 ರ ಬಿಲ್ ನಲ್ಲಿ ರೂ.100-00 ಗಳ ಹೆಚ್ಚುವರಿ ಶುಲ್ಕ ವಿಧಿಸಲಾಗಿದ್ದು, ಸ್ಪಷ್ಟೀಕರಣ ನೀಡುವಂತೆ ಕೋರಿದರು. | ಇದಕ್ಕೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಹಾಯಕ ಲೆಕ್ಕಾಧಿಕಾರಿ ಗಳಿಗೆ ಸದರಿ ಬಿಲ್ ಬಗ್ಗೆ ಗ್ರಾಹಕರಿಗೆ ಸೂಕ್ತ ಮಾಹಿತಿ ನೀಡುವಂತೆ ಸೂಚಿಸಿದರು. |

ಎಲ್ಲರಿಗೂ ವಂದಿಸಿ ಸಭೆಯನ್ನು ಸಂಜೆ 6-30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಭೆಯಲ್ಲಿ ಹಾಜರಿದ್ದವರ ಸಂಖ್ಯೆ. ---- 10
ಲಿಖಿತ ದೂರುಗಳ ಸಂಖ್ಯೆ. ---- 05

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾವಿಸನಿನಿ, ಚಾಮುಂಡಿಪುರಂ ಉಪವಿಭಾಗ, ಮೈಸೂರು.

ಪ್ರತಿಯನ್ನು ಅವಗಾಹನೆಗಾಗಿ ಸಲ್ಲಿಸಲಾಗಿದೆ

1) ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ವೃತ್ತ, ಕುವೆಂಪುನಗರ, ಚಾ.ವಿ.ಸ.ನಿ.ನಿ., ಮೈಸೂರು.
2) ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಎನ್.ಆರ್.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ.,ಮೈಸೂರು.
3) ಸಹಾಯಕ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ಶಾಖೆ, ಚಾವಿಸನಿನಿ, ವಿದ್ಯಾರಣ್ಯಪುರಂ /ಲಕ್ಷ್ಮಿಪುರಂ / ಕಡಕೊಳ ರವರ ಮಾಹಿತಿಗಾಗಿ.
4) ಕಿರಿಯ ಇಂಜಿನಿಯರ್(ವಿ) ಕಾರ್ಯ ಮತ್ತು ಪಾಲನೆ ಶಾಖೆ, ಚಾವಿಸನಿನಿ, ವಿದ್ಯಾರಣ್ಯಪುರಂ / ಜೆ.ಪಿ.ನಗರ / ಲಕ್ಷ್ಮಿಪುರಂ ರವರ ಮಾಹಿತಿಗಾಗಿ.